

ಅತ್ತೆ: ಏನೇ ಇದು ಸಾರಿನ ಪಾತ್ರೆಯಲ್ಲಿ ಎರಡು ಚಮಚ ಇದೆ.

ಸೊಸೆ: ಪಾಕಶಾಸ್ತ್ರ ಪುಸ್ತಕದಲ್ಲಿ ಸಾರಿನ ಪುಡಿ ಎರಡು ಚಮಚ ಹಾಕಿ ಎಂದಿತ್ತು. ಅದಕ್ಕೇ ಹಾಕಿದೆ ಅತ್ತೆ!

ಸಂಗ್ರಹ: ಎಂ.ಮೋಹನ್ ರಾವ್

## ಕಾಳಜಿ (ಚಿಂತೆ)

ಕಿಟ್ಟು: ಪಪ್ಪಾ, ಕಾಳಜಿ ಮಾಡುವುದರಿಂದ ಟೆನ್ಶನ್ ಬರುತ್ತದೆ. ಆದುದರಿಂದ ಮನುಷ್ಯ ಅನಾರೋಗ್ಯಕ್ಕೆ ಒಳಗಾಗುತ್ತಾನೆ ಅಲ್ವಾ?

ತಂದೆ: ಹೌದು ಮಗು. ನೀನು ಸರಿಯಾಗಿ ತಿಳಿದುಕೊಂಡಿದ್ದೀಯಾ.

ಕಿಟ್ಟು: ಅದೇ ಕಾರಣಕ್ಕೆ ನಾನು ಅಭ್ಯಾಸದ ಕುರಿತು ಕಾಳಜಿ ಮಾಡುವುದನ್ನು ಬಿಟ್ಟು ಬಿಟ್ಟಿದ್ದೇನೆ!

★★★

## ಜಾಣ ಮತ್ತು ಮೂರ್ಖ

ಶಿಕ್ಷಕ: ಪುಟ್ಟು, 'ಜಾಣ ಮತ್ತು ಮೂರ್ಖ ಮನುಷ್ಯ' ಇವುಗಳ ನಡುವಣ ವ್ಯತ್ಯಾಸ ಹೇಳು?

ಪುಟ್ಟು: ಜಾಣ ಮನುಷ್ಯರು ಇಂತಹ ಪ್ರಶ್ನೆಗಳನ್ನು ಕೇಳುವುದಿಲ್ಲ.

ಸಂಗ್ರಹ: ಮಲ್ಲಿಕಾರ್ಜುನ ಹ.ಬಗಲಿ






## ಅಡುಗೆಯೇ ಬರೋದಿಲ್ಲ!

ಸುಬ್ಬಮ್ಮ: ಏನ್ರೀ ರಾಧಮ್ಮ, ನಿಮ್ಮ ಮಗಳನ್ನು ಗಂಡನ ಮನೆಗೆ ಇನ್ನೂ ಕಳಿಸಿಲ್ಲವೇ?

ರಾಧಮ್ಮ: ಅಯ್ಯೋ ಏನು ಹೇಳೋದು ಅವಳ ಬಾಳೆಲ್ಲಾ ಹಾಳಾಯ್ತು.

ಸುಬ್ಬಮ್ಮ: ಯಾಕ್ರಿ ಹಾಗಂತೀರಾ?

ರಾಧಮ್ಮ: ಆ ಹುಡುಗನಿಗೆ ಅಡುಗೆ ಮಾಡಲು ಬರೋದಿಲ್ವಂತೆ ಕಣ್ರೀ!

★★★

## ಸಮಯದ ಅಭಾವ!

ಪುಟ್ಟ: (ಅಳುತ್ತಾ ಅಮ್ಮನ ಬಳಿ ಬಂದು) ಅಮ್ಮಾ ನಾನು ಆಟ ಆಡುವಾಗ ಬಿದ್ದು ಬಿಟ್ಟೆ

ಅಮ್ಮ: ಆದರೆ ಅದಕ್ಯಾಕೆ ಈಗ ಅಳ್ತಾ ಇದ್ದೀಯ ?

ಪುಟ್ಟ: ಆಗ ಅಳಲು ನನಗೆ ಟೈಮ್ ಇರಲಿಲ್ಲ, ಅದಕ್ಕೆ ಈಗ ಅಳುತ್ತಿದ್ದೇನೆ....

★★★

## ಸಾಧ್ಯವಿಲ್ಲ!

ಗುಂಡ: ಪ್ರಿಯೇ, ನಿನ್ನನ್ನು ನಾನು ಮದುವೆಯಾಗಲು ಸಾಧ್ಯವಿಲ್ಲ..

ಪ್ರಿಯೆ: (ಗಾಬರಿಯಿಂದ) ಏಕೆ ಸಾಧ್ಯವಿಲ್ಲ?

ಗುಂಡ: ಮನೆಯಲ್ಲಿ ಒಪ್ಪುವುದಿಲ್ಲ..

ಪ್ರಿಯೆ: ಮನೆಯಲ್ಲಿ ಯಾರು ಒಪ್ಪುವುದಿಲ್ಲ?

ಗುಂಡ: ನನ್ನ ಹೆಂಡತಿ ಮತ್ತು ಮಕ್ಕಳು!

★★★

## ಅತ್ತೆ ಗಲಾಟೆ

ಪೋಲಿಸ್: ಎಲ್ಲಿಂದ ಬರುತ್ತಿದ್ದೀ?

ಗುಂಡ: ಸ್ಮಶಾನದಲ್ಲಿ ಅತ್ತೆಯನ್ನು ಮಣ್ಣು ಮಾಡಿ ಬಂದೆ.

ಪೋಲಿಸ್: ಮೈ, ಕೈಯೆಲ್ಲಾ ಗಾಯ ಆಗಿದೆಯಲ್ಲಾ?

ಗುಂಡ: ಮಣ್ಣು ಮಾಡುವಾಗ ಅತ್ತೆ ತುಂಬಾ ಗಲಾಟೆ ಮಾಡಿದ್ರು.

★★★

## ಪ್ರಾರ್ಥನೆ

ಸುಲೋಚನಾ: ನೀವು ಊಟ ಮಾಡುವಾಗ ಪ್ರಾರ್ಥನೆ ಮಾಡುತ್ತೀರಾ?

ರಂಗ: ನನಗೆ ಪ್ರಾರ್ಥನೆ ಮಾಡಬೇಕಾದ ಅಗತ್ಯ ಇಲ್ಲ.

ಸುಲೋಚನಾ: ಹೌದಾ.. ಯಾಕೆ?

ರಂಗ: ಯಾಕಂದ್ರೆ ನನ್ನ ಹೆಂಡತಿ ಅಡುಗೆಯನ್ನು ತುಂಬ ಚೆನ್ನಾಗಿ ಮಾಡ್ತಾಳೆ.

ಸಂಗ್ರಹ: ವಿದ್ಯಾ ವಿ ಹಾಲಭಾವಿ